ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.976/2021

| | | | |
|---|---|---|---|
| ಸಾಕ್ಷಿಯ ಹೆಸರು | : ಗೋಪಾಲ್ | ಸಿ.ಡಬ್ಲ್ಯು | 1 |
| ತಂದೆಯ ಹೆಸರು | : ರಾಜಣ್ಣ | ಪಿ.ಡಬ್ಲ್ಯು | 4 |
| ವಯಸ್ಸು | : 50 ವರ್ಷ | | |
| ಉದ್ಯೋಗ | : ಚಾಲಕ ವೃತ್ತಿ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕ:20.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ಚಾಸ-2 ನನ್ನ ಹೆಂಡತಿ, ಬಸಪ್ಪ ಮತ್ತು ಸೀತಮ್ಮ ಇವರ ಪರಿಚಯ ಇದೆ. 1 ನೇ ಆರೋಪಿ ನನ್ನ ಅಣ್ಣ ಇರುತ್ತಾನೆ ಮತ್ತು ಉಳಿದ ಆರೋಪಿತರು ನನ್ನ ಅಣ್ಣನ ಕುಟುಂಬದ ಸದಸ್ಯರು ಇರುತ್ತಾರೆ. 2020 ನೇ ಸಾಲಿನಲ್ಲಿ ಆಟೋದ ಮೇಲಿನ ಟಾರ್ಪೆಲ್ ಹರಿದ ವಿಚಾರವಾಗಿ ನನ್ನ ಮತ್ತು ಆರೋಪಿತರ ನಡುವೆ ಬಾಯಿ ಮಾತಿನ ತಕರಾರುಗಳು ಆಗಿದ್ದವು, ನಮಗೂ ಮತ್ತು ಅವರಿಗೂ ಯಾವುದೇ ಜಗಳ ಆಗಿಲ್ಲ. ಆರೋಪಿತರು ಅಕ್ರಮ ಕೂಟ ರಚಿಸಿಕೊಂಡು ಬಂದು ನನಗಾಗಲೀ ನನ್ನ ಹೆಂಡತಿಗಾಗಲೀ ಯಾವುದೇ ರೀತಿ ಬೈದಿರುವುದಿಲ್ಲ, ಹೊಡೆ ಬಡೆ ಮಾಡಿರುವುದಿಲ್ಲ ಮತ್ತು ಜೀವದ ಬೆದರಿಕೆಯನ್ನು ಕೂಡ ಹಾಕಿರುವುದಿಲ್ಲ. ಸಿಟ್ಟಿನ ಭರದಲ್ಲಿ ಪೋಲೀಸರಿಗೆ ವಿಷಯವನ್ನು ತಿಳಿಸಿದ್ದೇನೆ ಆದರೆ ಯಾವುದೇ ದೂರು ಕೊಟ್ಟಿರುವುದಿಲ್ಲ. ಪೋಲೀಸರಿಗೆ ನಾನು ಸ್ಥಳ ತೋರಿಸಿಲ್ಲ ಮತ್ತು ಅವರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

ದೂರನ್ನು ನಿಪಿ-1 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು 1(ಬಿ) ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:-

ದಿನಾಂಕ 06.05.2020 ರಂದು ಸಂಜೆ 6 ಗಂಟೆಯ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಮನೆಯಲ್ಲಿದ್ದಾಗ ಆಟೋ ಮೇಲಿನ ಟಾರ್ಪೆಲ್ ಹರಿದಿರುವುದನ್ನು ಕಂಡು, ಯಾರು ಹರಿದಿದ್ದಾರೆ ಎಂದು ಕೇಳುತ್ತಿದ್ದಾಗ ಆರೋಪಿಗಳು ಅಕ್ರಮ ಕೂಟ ರಚಿಸಿಕೊಂಡು ನಮ್ಮ ಮನೆಯ

ಹತ್ತಿರ ಬಂದರು ಎಂದರೆ ಸರಿಯಲ್ಲ. ಅವರು ನನ್ನನ್ನು ಕುರಿತು ಅವಾಚ್ಯವಾಗಿ ಬೈಯ್ದು ಜೀವದ ಬೆದರಿಕೆ ಹಾಕಿದರು, ಕಲ್ಲಿನಿಂದ ನನ್ನ ಹಣೆಗೆ ಹೊಡೆದು ಗಾಯಗೊಳಿಸಿದರು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ನನ್ನ ಹೆಂಡತಿಗೆ 3 ರಿಂದ 5 ನೇ ಆರೋಪಿತರು ಸೇರಿ ಅವಾಚ್ಯವಾಗಿ ಬೈಯ್ದು, ಆಕೆಯ ಮೈಮೇಲಿನ ನೈಟಿಯನ್ನು ಹರಿದು ಹಾಕಿ ಅವಮಾನಗೊಳಿದರು ಎಂದರೆ ಸರಿಯಲ್ಲ. ಇದೇ ರೀತಿ ಪೋಲೀಸರಿಗೆ ದೂರಿನಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ 1 ನೇ ಆರೋಪಿ ನನ್ನ ಸಹೋದರ ಇರುವ ಕಾರಣ ಊರಿನ ಪ್ರಮುಖರ ಸಲಹೆಯಂತೆ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ಕಾರಣಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.